ಸಂಚಿಕೆ ೬
ಜೂನ್ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

## ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಸಂಚಿಕೆ ೬
ಜೂನ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

ಈ ಸಂಚಿಕೆಯಲ್ಲಿ ...

ಸಂಪಾದಕೀಯ ಪುಟ ೧
ಪೋಷಕರ ಅಂಕಣ ಪುಟ ೨
ಹಬ್ಬ ಪುಟ ೩
ಅ ಆ ಅಡ್ವೆಂಚರ್ ಪು ೪
ಸಂದರ್ಶನ ಪುಟ ೫ -೬
ಚಿಣ್ಣರ ಚಿತ್ರ ಕಲೆ ಪುಟ ೭
ನಾ ಕಂಡ ಸಿನಿಮಾ ಪುಟ ೮
ಪದ ಹುಡುಕೋಣ ಪುಟ ೯
ಅಡುಗೆ - ಪುಟ ೧೦

**ಸಂಪಾದಕೀಯ: ರಜನೀ ಮಹೇಶ್**

ಅಭಿರುಚಿ ಮತ್ತು ಅವಕಾಶ ಎಷ್ಟು ಸುಂದರವಾದ ಪದಗಳು. ಯಾವುದೇ ಕೆಲಸಕ್ಕೆ ಅಭಿರುಚಿ ಎಷ್ಟು ಮುಖ್ಯವೋ ಹಾಗೆಯೇ ಕೆಲಸದ ಪರಿಪೂರ್ಣತೆ ಗೆ ಅವಕಾಶವೂ ಅಷ್ಟೇ ಅಗತ್ಯ.

ನಮ್ಮ ಪೋಷಕರ ವೃತ್ತಿ ಕೃಷಿ ಅಲ್ಲದಿದ್ದರೂ, ನಮಗೆ ಬೇಕಾದ ದಿನನಿತ್ಯದ ಆಹಾರವನ್ನು ನಾವೇ ಬೆಳೆಯುತ್ತಿದ್ದೆವು. ಭತ್ತ, ಉದ್ದು, ಹೆಸರು, ಅವಡೆ, ನೆಲಗಡಲೆ, ತೆಂಗು, ಸೊಪ್ಪು, ಬೆಂಡೆಕಾಯಿ, ಹೀರೆಕಾಯಿ, ತೊಂಡೆ ಕಾಯಿ ... ಹೀಗೆ ಎಲ್ಲ ತರಹದ ತರಕಾರಿಗಳನ್ನು ಮನೆಯಲ್ಲಿಯೇ ಬೆಳೆಸುತ್ತಿದ್ದೆವು ಹಾಲು ಮೊಸರು, ತುಪ್ಪ ಎಲ್ಲವೂ ಮನೆಯದೇ. ಅತ್ತೆ ಮನೆಯ ಆಲೆಮನೆಯ ಬೆಲ್ಲ ಬಂದರೆ, ದೊಡ್ಡಮ್ಮನ ಮನೆಯಿಂದ ಕಾಳು ಮೆಣಸು, ಮಾವನ ಮನೆಯಿಂದ ಪುನರ್ಪುಳಿ, ಅವಟೆಕಾಯಿ. ಹೀಗಾಗಿ ಅಂಗಡಿಯಿಂದ ತರುವ ಸಾಮಾನುಗಳು ಬೆರಳೆನಿಕೆಯಷ್ಟು. ಉದಾಹರಣೆಗೆ ತೊಗರಿಬೇಳೆ, ಗೋಧಿ, ಸಕ್ಕರೆ, ಕೆಲವು ತರಕಾರಿಗಳು – ಟೊಮೇಟೊ, ಕ್ಯಾರೆಟ್, ಕೋಸು. ಭತ್ತದ ಬೀಜದಿಂದ ಅಕ್ಕಿ, ಅವಲಕ್ಕಿಯಾಗುವ ಎಲ್ಲಾ ಹಂತಗಳನ್ನೂ ಅರಿತಿದ್ದೆವು. ನನ್ನ ಹಾಗೆ ನೀವೂ ಇಂತಹ ವಾತಾವರಣದಲ್ಲಿ ಬೆಳೆದು ಬಂದಿರಬಹುದು.

ಈಗ ನಮಗೆ ಇಲ್ಲಿ ಭತ್ತ, ತೆಂಗು ಬೆಳೆಸುವ ಅವಕಾಶ ಇಲ್ಲದೆ ಇರಬಹುದು. ಆದ್ರೆ ಪ್ಯಾಟಿಯೋ ಅಥವಾ ಬ್ಯಾಕ್ ಯಾರ್ಡ್ ನಲ್ಲಿ ಸಣ್ಣ ಹೂವಿನ ಗಿಡವೋ, ಒಂದು ಟೊಮೇಟೊ ಗಿಡವೋ ನೆಟ್ಟು, ಮಕ್ಕಳಲ್ಲಿ ಗಿಡ ನೆಡುವ, ಬೆಳೆಸುವ ಹವ್ಯಾಸವನ್ನು ಬೆಳೆಸಬಹುದು.

ದುಡ್ಡು ಕೊಟ್ಟರೆ ಬೇಕಾದ ತರಕಾರಿ ಸಿಗುತ್ತೆ ಆದರೆ ನಾವು ಕೈಯಾರೆ ಬೆಳೆಸಿದ ಹೂವು, ತರಕಾರಿ ನೋಡಿದಾಗ ಆಗುವ ಸಂತೋಷ ಮತ್ತು ತೃಪ್ತಿಯೇ ಬೇರೆ. ಮಕ್ಕಳಿಗೆ ಗಿಡ ನೆಟ್ಟು ಬೆಳೆಸಲು ಅವಕಾಶ ಮಾಡಿಕೊಟ್ಟು, ಅವರಲ್ಲಿ ಕೈತೋಟದ ಅಭಿರುಚಿಯನ್ನು ಬೆಳೆಸಿ. ಪರಿಸರವನ್ನು ಉಳಿಸಿ.

"ಹಸಿರಲಿ ಅಡಗಿದೆ ಮಾನವನ ಉಸಿರು
ಗಿಡ ಮರ ಬೆಳೆಸುತ ತುಂಬಲಿ ಹಸಿರು"


ರಜನೀ


ಅದಿತ್


ಪ್ರೇರಣ


ಪ್ರಕೃತಿ


ಆರುಶ್



*ಹಚ್ಚೇವು ಕನ್ನಡದ ದೀಪ...*



## ಪೋಷಕರ ಅಂಕಣ : ರೂಪಾ ಬ್ಯಾಡಗಿ


**ಬೆ**ಳಿಗ್ಗೆ ಎದ್ದು ಆತುರದಲ್ಲಿ ತಿಂಡಿ ಅಡುಗೆ ಮುಗಿಸಿ, ಮಕ್ಕಳಿಗೆ ಸ್ನಾನ ಮಾಡಿಸಿ, ಬೇಗ ಬೇಗ ತಯಾರಾಗಿ, ಅರ್ಧಂಬರ್ಧ ತಿಂಡಿ ತಿಂದು, ಮಕ್ಕಳನ್ನು ಸ್ಕೂಲ್ ಗೆ ಬಿಟ್ಟು, ಆಫೀಸ್ ಗೆ ಹೋಗಿ... ಇಡೀ ದಿನ ಹೊರಗಡೆ ಕೆಲಸ ಮಾಡಿ, ಸಂಜೆಯಾಯಿತೆಂದರೆ ಮನೆಗೆ ಬಂದು ಮಕ್ಕಳ, ಹೊಮವರ್ಕ್, ಊಟ ತಯಾರಿ, ಮಕ್ಕಳ ಕ್ಲಾಸ್ ಗಳು ಹೀಗೆ ...ಅವಳ ಬಗ್ಗೆ ಆಲೋಚಿಸಲು ಸ್ವಲ್ಪವೂ ಸಮಯ ಸಿಗದಷ್ಟು ಕಾರ್ಯನಿರತಳಾಗುತ್ತಾಳೆ. ನಗುತ್ತಲೇ ಎಲ್ಲರ ಮನ ಗೆಲ್ಲುವ ಹಸನ್ಮುಖಿ... ಈ ಆಧುನಿಕ ಮಹಿಳೆ.
ದಿನಬೆಳಗಾಯಿತೆಂದರೆ ಅಡುಗೆಯವಳು, ಮನೆ ಕೆಲಸದವಳು, ಡಾಕ್ಟರ್, ಡ್ರೈವರ್, ಟೀಚರ್, ಅಡ್ವೈಸರ್ ಆಗಿ ಸಂಸಾರ ನೌಕೆಯನ್ನು ಸಾಗಿಸುತ್ತಾಳೆ. ಕ್ರೀಡೆ, ರಾಜಕೀಯ, ಕಲೆ, ಸಾಹಿತ್ಯ, ರಂಗಭೂಮಿ, ಸೇನೆ, ವೈದ್ಯಕೀಯ, ವಿಜ್ಞಾನ-ತಂತ್ರಜ್ಞಾನ, ಶಿಕ್ಷಣ...ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆ ತನ್ನದೇ ಆದ ಛಾಪು ಮೂಡಿಸಿದ್ದಾಳೆ. ಮೊದಲು ಬರಿ ಮನೆಗೆಲಸ ಮತ್ತು ಸಂಸಾರ ಸಾಗಿಸುವ ಕೆಲಸಕ್ಕೆ ಸೀಮಿತವಾಗಿದ್ದ ಮಹಿಳೆ, ಇಂದು ಪುರುಷರಿಗೆ ಸಮನಾಗಿ ಸ್ವಸಾಮರ್ಥ್ಯದಿಂದಲೇ ಲಿಂಗಸಮಾನತೆ ಸಾಧಿಸುವತ್ತ ದೃಢ ಹೆಜ್ಜೆಯಿಟ್ಟಿದ್ದಾಳೆ.

ಪ್ರಕೃತಿಯ ವಿಶೇಷ ಸೃಷ್ಟಿ ಯೇ ಮಹಿಳೆ. ಆಧುನಿಕ ಯುಗದಲ್ಲಿ ಆಕೆ ತನ್ನನ್ನು ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಲ್ಲದೆ, ತನ್ನ ಸಾಮರ್ಥ್ಯವನ್ನು, ಪ್ರಾಬಲ್ಯವನ್ನು ತೋರಿಸಿ ಮೆರೆದಿದ್ದಾಳೆ.

### ಆಧುನಿಕ ನಾರಿ

ಅವಳ ಮನಸು ನದಿಯಹಾಗೆ ನಿಷ್ಕಲ್ಮಶ
ಅವಳದು ಆಕಾಶದಷ್ಟು ವಿಶಾಲ ಹೃದಯ
ಅವಳಿಗೆ ಪಕ್ಷಿಯಹಾಗೆ ಬಾನೆತ್ತರಕ್ಕೆ ಹಾರುವ ಕನಸು
ಅವಳ ಸೌಂದರ್ಯ ಅವಳ ಸ್ವಾಭಿಮಾನದಲ್ಲಿದೆ
ಅವಳ ಸೌಂದರ್ಯ ಅವಳ ಆತ್ಮವಿಶ್ವಾಸದಲ್ಲಿದೆ
ಅವಳ ಸೌಂದರ್ಯ ಅವಳ ಸ್ವಾತಂತ್ರ್ಯದಲ್ಲಿದೆ
ಅವಳಿಗೆ ಶಿಕ್ಷಣವೆಂಬ ದೃಢವಾದ ರೆಕ್ಕೆಯೊಂದು ದೊರೆತರೆ,
ಆಧುನಿಕ ಜಗತ್ತಿನ ಅನ್ವೇಷಣೆಯ
ಅವಕಾಶಗಳಲ್ಲಿ ತನ್ನನ್ನು ತೊಡಗಿಸಿಕೊಂಡು
ಸ್ವಾವಲಂಬಿ ಮತ್ತು ಸಂತೋಷಕರ
ಜೀವನ ಸಾಗಿಸುವುದರಲ್ಲಿ ಯಶಸ್ವಿಯಾಗುತ್ತಾಳೆ

ರೂಪಾ ಬ್ಯಾಡಗಿ



## ಫಾದರ್ಸ್ ಡೇ : ಪ್ರೇರಣ ಗೌಡ




ಫಾದರ್ಸಡೇ ಬಗ್ಗೆ ಹೇಳುವುದಕ್ಕಿಂತ ಮುಂಚೆ ಅಪ್ಪನ ಬಗ್ಗೆ ಹೇಳಕ್ಕೆ ಇಷ್ಟಪಡ್ತಿನಿ.
ಅಮ್ಮನಂತಹ ಅಪ್ಪ!
ನಿನ್ನಂಥ ಅಪ್ಪ ಇಲ್ಲ...ಬಾಳಲ್ಲಿ ನೀನೇ ಎಲ್ಲಾ...
ಇಂದಿನ ಅಪ್ಪ ಸಿಡುಕನಲ್ಲ. ಗಂಭೀರನೂ ಅಲ್ಲ. ಅವನೀಗ 'ಅಮ್ಮ'ನಂತೆಯೇ ಮಕ್ಕಳನ್ನು ನೋಡಿಕೊಳ್ಳುತ್ತಾನೆ, ಅವರ ಜತೆ ಬೆರೆಯುತ್ತಾನೆ.
''ತಾನು ಎಲ್ಲಾ ಕಡೆ ಇರುವುದಕ್ಕೆ ಸಾಧ್ಯ ಇಲ್ಲ ಅಂತ ದೇವರು 'ತಾಯಿ'ಯನ್ನು ಸೃಷ್ಟಿಸಿದ. ಹಾಗೇ, ಏಕಕಾಲದಲ್ಲಿ ತನ್ನಿಂದ ಎಲ್ಲರನ್ನೂ ಸಲಹಲು ಸಾಧ್ಯವಿಲ್ಲ ಅಂತ 'ತಂದೆ'ಯನ್ನು ಸೃಷ್ಟಿಸಿದ.''
ಈ ಮಾತು ವಿಶ್ವವ್ಯಾಪಿಯಾಗಲು ಕಾರಣ 'ಅಪ್ಪ' ಅನ್ನುವ ಪದದಲ್ಲಿರುವ ಅತೀವ ಒಲವು. 'ಅಪ್ಪ' ಅನ್ನುವ ಎರಡು ಅಕ್ಷರಗಳಲ್ಲಿ ಸಾವಿರ ಆನೆಗಳ ಬಲವಿದೆ. ಭಯ ಆದಾಗ ಮುಗ್ಧ ಮಕ್ಕಳು ಓಡಿಬಂದು ಬಿಗಿದಪ್ಪುವುದು 'ತಂದೆ'ಯನ್ನೇ.! ಮಕ್ಕಳಿಗೆ ಧೈರ್ಯತುಂಬಿ, ಮಾರ್ಗದರ್ಶನ ನೀಡುವ ತಂದೆಗೆ ಒಂದು ಸಲಾಂ ಸಲ್ಲಿಸುವುದಕ್ಕೆ 'ವಿಶ್ವ ತಂದೆಯರ ದಿನ'ಆಚರಿಸುತ್ತೇವೆ. ಸದಾ ಸಲಹುವ ನಿಮ್ಮ ತಂದೆಗೆ ಈ ದಿನ ಒಂದು 'ಥ್ಯಾಂಕ್ಸ್' ಹೇಳಿಬಿಡಿ.
ಫಾದರ್ಸ್ ಡೇ ಪ್ರತಿ ವರ್ಷ ಜೂನ್ ಮೂರನೇ ಬಾನುವಾರ ಸೆಲೆಬ್ರೇಟ್ ಮಾಡತ್ತಾರೆ. ನಿಮಗಿದ್ದು ಗೊತ್ತಾ - ಫಾದರ್ಸ್ಡೇ ಪ್ರಪ್ರಥಮ ಆಚರಿಸಿದ್ದು ಸ್ಪೋಕೇನ್, ವಾಷಿಂಗ್ಟನ್ ನಲ್ಲಿ.
ಫಾದರ್ಸ್ ಡೇ ತುಂಬ ಸ್ಪೆಷಲ್ ನಂಗೆ , ನಾನು ನೋರ್ಮಲೀ ಆ ದಿನ ಅಪ್ಪನಿಗೆ ಸರ್ಪ್ರೈಸ್ ಮಾಡ್ತೀನಿ. ನಾನು ಮತ್ತು ನನ್ನ ತಮ್ಮ ಅಪ್ಪ ಏಳುವುಧಕ್ಕಿಂತ ಮುಂಚೆ ಎದ್ದು ಸರ್ಪ್ರೈಸ್ ಗಿಫ್ಟ್ ಅಪ್ಪನ ಬೆಡ್ ಪಕ್ಕ ಇಟ್ಟಿದ್ದ್ವಿ . ಅಪ್ಪ ಎದ್ದ ತಕ್ಷಣ ನಮ್ಮ ಗಿಫ್ಟ್ ನೋಡಿ ಖುಷಿ ಪಟ್ಟರು, ಮತ್ತೆ ಆ ದಿನ ಅಪ್ಪನ ಕೆಲಸಗಳಲ್ಲಿ ಹೆಲ್ಪ್ ಮಾಡತೀನಿ.
ರಜನಿ ಆಂಟಿಗೆ ಥ್ಯಾಂಕ್ಸ್ ಹೇಳ್ಬೇಕು ಯಾಕೆಂಧರೆ ಈ ವರ್ಷ ಸಮ್ಮರ್ ಕ್ಯಾಂಪ್ ನಲ್ಲಿ ನೈಸ್ ಸರ್ಪ್ರೈಸ್ ಐಡಿಯಾಸ್ ಕೊಟ್ಟು ನಮ್ಮ ಕೈಯಲ್ಲೇ ಅಪ್ಪನಿಗೆ ಗಿಫ್ಟ್ ಮಾಡಿಸಿದ್ರು ಮತ್ತು ಹೋದ ವರ್ಷ ಚಿಗುರು ಕನ್ನಡ ಶಾಲೆಯ ಕುಟುಂಬದವರೆಲ್ಲ ಸೇರಿ ಫಾದರ್ಸ್ ಡೇ ಆಚರಿಸಿದ್ಧೆವು . ನಾನು ಮಾತು ನನ್ನ ತಮ್ಮ ಚೌಕ ಚಿತ್ರಧ ಹಾಡು 'ಅಪ್ಪಾ ಐ ಲವ್ ಯು ಪಾ' ಹಾಡಿ ಮನೆಯಲ್ಲಿ ಅಪ್ಪನಿಗೆ ಸರ್ಪ್ರೈಸ್ ಮಾಡಿದ್ಧೆವು.
ಕೆಲವೊಂದು ಫಾದರ್ಸ್ ಡೇ ದಿನ ಬಳಸುವ ಕ್ವೋಟ್ಸ್ -
'ಅಪ್ಪನೇ ಮಗನ ಹೀರೋ ಮತ್ತು ಮಗಳ ಮೊದಲ ಪ್ರೀತಿ'
'ಯಾರಿಗೆ ಬೇಕು ಸೂಪರ್ಹೀರೋ ತಂದೆ ಪಕ್ಕದಲ್ಲಿದ್ಧಾಗ !!'
ನಮ್ಮ ಫಾದರ್ಸ್ ಡೇ ಪಿಕ್ಚರ್ಸ್ ಇಲ್ಲಿದೆ.








## ಅ ಆ ಅಡ್ವೆಂಚರ್: ಅದಿತ್ ಕುಮಾರ್




ನಾನು ಮತ್ತು ನನ್ನ ತಂಗಿ !

## ರಂಗ್ ರಂಗ್ ರಂಗೋಲಿ








## ಸಂದರ್ಶನ : ಪ್ರಕೃತಿ ಉಪಾಧ್ಯ

ಕನ್ನಡದ ಸಂವೇದನಾಶೀಲ ಲೇಖಕರಲ್ಲಿ ಒಬ್ಬರಾದ **ಬಿದರಹಳ್ಳಿ ನರಸಿಂಹಮೂರ್ತಿ**ಯವರು ಕನ್ನಡ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಇವರ ಎರಡು ಕಥಾಸಂಕಲನ ಗಳಾದ “ಶಿಶು ಕಂಡ ಕನಸು“ ಮತ್ತು “ಹಂಸೆ ಹಾರಿತ್ತು“ ಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಲಭಿಸಿದೆ. ಜೊತೆಗೆ ಶಿವಾನಂದ ಪಾಟೀಲ ಪ್ರಶಸ್ತಿ, ಮಹಾಲಿಂಗರಂಗ ಪ್ರಶಸ್ತಿಗೆ ಭಾಜನರಾಗಿದ್ದಾರೆ. “ಹೊಳೆಮಕ್ಕಳು“ ಕಾದಂಬರಿ, “ಮಹಾಗಾರುಡಿ” ನಾಟಕ, “ಕಡಲಂತೆ ಕಾರಂತ “, “ ಅರಿವಲಗು” ಮುಂತಾದವು ಇವರ ವಿಮರ್ಶಾ ಸಂಕಲನಗಳು. ಮಾರ್ಕ್ವಿಜ್ ವಾಚಿಕೆ, ನ್ಯಾಮಿತಿ ಪ್ರಭಣ್ಣನವರ ಕನ್ನಡ -ಕನ್ನಡ ನಿಘಂಟು ಇವರ ಪ್ರಮುಖ ಸಂಪಾದನೆಗಳು. ಇದಲ್ಲದೆ “ಕಾಡಿನೊಳಗಿದೆ ಜೀವ”, “ಸೂರ್ಯದಂಡೆ”, “ಅಕ್ಕಿಕಾಳು ನಕ್ಕಿತಮ್ಮ”, “ ಭಾವಕ್ಷೀರ “, ಇವರ ಕವಿತೆಗಳು. ಇವರ ಹಲವಾರು ಕವಿತೆಗಳು ಪದವಿ ತರಗತಿಯ ಪುಸ್ತಕದಲ್ಲಿ ಸೇರ್ಪಡೆಗೊಂಡಿವೆ. ಹಾಗೂ ೭೭ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆಯ ಗೌರವ ಇವರಿಗೆ ಸಂದಿದೆ.


**ನನ್ನ ಮತ್ತು ಬಿದರಹಳ್ಳಿ ನರಸಿಂಹಮೂರ್ತಿ ಯವರ ಸಂದರ್ಶನದ ಒಂದು ತುಣುಕು.**



## ನನ್ನ ಮತ್ತು ಬಿದರಹಳ್ಳಿ ನರಸಿಂಹಮೂರ್ತಿ ಯವರ ಸಂದರ್ಶನದ ಒಂದು ತುಣುಕು.

**ಪ್ರಶ್ನೆ** : ನಿಮಗೆ ಯಾವ ವಯಸ್ಸಿನಲ್ಲಿ ಕಥೆ ಬರೆಯುವ ಇಂಟರೆಸ್ಟ್ ಶುರುವಾಯಿತು?
**ಉತ್ತರ** : ಎಸ್. ಎಸ್. ಎಲ್ . ಸಿ (೧೦ ನೇ ತರಗತಿ ) ಯಲ್ಲಿ ಶುರುವಾಯಿತು.
**ಪ್ರಶ್ನೆ** : ನಿಮ್ಮ ಫಸ್ಟ್ ಸ್ಟೋರಿ ನ ಯಾವ ವಯಸ್ಸಿನಲ್ಲಿ ಬರೆದ್ರಿ ಮತ್ತು ಆ ಸ್ಟೋರಿ ಯಾವುದು?
**ಉತ್ತರ** : ೧೪ – ೧೫ ನೇ ವಯಸ್ಸು, "ನಮ್ಮ ಶಾಲೆಯ ಗಡಿಬಿಡಿ" – ನಾನು ಮೊದಲು ಬರೆದ ಕಥೆ.
**ಪ್ರಶ್ನೆ** : ನೀವು ಯಾವ ಯಾವ ದೊಡ್ಡ ಸಾಹಿತಿಗಳನ್ನು ಮೀಟ್ ಮಾಡಿದ್ದೀರಿ?
**ಉತ್ತರ** : ಡಾ. ಶಿವರಾಮ್ ಕಾರಂತರು, ಅವರು ನನ್ನ ದೇವರು. ನಿರಂಜನ, ಅನುಪಮ ನಿರಂಜನ, ಪ.ವೆಂ.ಆಚಾರ್ಯ, ಅನಂತಮೂರ್ತಿ, ಲಂಕೇಶ್, ಪೂರ್ಣಚಂದ್ರ ತೇಜಸ್ವಿ. ಕುವೆಂಪು ಮತ್ತು ದ. ರಾ. ಬೇಂದ್ರೆ ಅವರನ್ನೂ ಕೂಡ ಭೇಟಿ ಮಾಡಿದ್ದೇನೆ.
**ಪ್ರಶ್ನೆ** : ನಿಮ್ಮ ಇಂಟನ್ಯಾಷನಲ್ ಟ್ರಾವೆಲ್ ಬಗ್ಗೆ ಬರೆದಿದ್ದೀರಾ? ಹೌದು ಅಂದ್ರೆ ಅದು ಯಾವುದು?
**ಉತ್ತರ** : ಅಮೇರಿಕಾ ಪ್ರವಾಸದ ಬಗ್ಗೆ ಬರೀತಾ ಇದೀನಿ. ನಯಾಗರದ ಬಗ್ಗೆ ಒಂದು ಕಥೆನೇ ಬರೆದಿದೀನಿ. ಅಲ್ಲಿನ ಫೋಕ್ ಕಥೆ ಗಳನ್ನೂ ಇಟ್ಟುಕೊಂಡು "ಕಾಲ ನದಿಯ ವಿಸ್ಮಯ ಲಹರಿ" ಅಂತ ಕಥೆ ಬರೆದಿದೀನಿ. ಇದೀಗ ಗ್ರಾಂಡ್ ಕ್ಯಾನ್ನಿಯನ್ ಬಗ್ಗೆ ಕೂಡ ಒಂದು ಕಥೆ ಬರೆದಿದೀನಿ. ಕಥೆಯ ಹೆಸರು "ಎಂಜೆಲ್ಸ್ ವಿಂಡೊ ".
**ಪ್ರಶ್ನೆ** : ನನ್ನ ಹಾಗೆ ಇಲ್ಲಿ ಹುಟ್ಟಿ ಬೆಳೆದ ಕನ್ನಡ ಮಕ್ಕಳನ್ನು ನೋಡಿದ್ರೆ ನಿಮಗೆ ಏನು ಅನ್ನಿಸುತ್ತೆ?
**ಉತ್ತರ** : ನನಗೆ ಸಂತೋಷನೇ ಆಗುತ್ತೆ. ಯಾಕೇಂದ್ರೆ ಅವರು ಹುಟ್ಟುತಾನೇ ಬೈಲಿಂಗ್ಯುವಲ್ , ಟ್ರೈ ಲಿಂಗ್ಯುವಲ್, ಮಲ್ಟಿಲಿಂಗ್ಯುವಲ್ ಆಗಿ ಬೆಳೀತಾರೆ. ಭಾಷೆಗಳು ಅಂದ್ರೆ ಮಕ್ಕಳ ಆಟಗಳು ಇದ್ದ ಹಾಗೆ. ಒಂದು ಆಟ ಬೇಜಾರು ಆದ್ರೆ ಇನ್ನೊಂದು ಆಟ ಆಡುತ್ತಾರೆ ಹಾಗೆ ಭಾಷೆಗಳನ್ನು ಬೇಗ ಪಿಕ್ ಅಪ್ ಮಾಡುತ್ತಾರೆ. ೫ ರಿಂದ ೭ ನೆ ವಯಸ್ಸಿನೊಳಗೆ ಅವರು ೫ -೭ ಭಾಷೆ ಕಲಿಬಹುದು. ನ್ಯಾಚುರಲ್ ಆಗಿ ಕಲಿಬಹುದು. ಅದರಿಂದ ನೀವೇನು ಭಾಷಿಕ ಅನಾಥರು ಅಂತ ನನಗೆ ಅನ್ನಿಸುತ್ತಿಲ್ಲ.
**ಪ್ರಶ್ನೆ** : ನಾವು ಯಾಕೆ ಕನ್ನಡ ಕಲಿಬೇಕು?
**ಉತ್ತರ** : ಮಗು ಯಾಕೆ ತಾಯಿ ಹಾಲು ಕುಡಿಬೇಕು? ಮಗು ಬೆಳೆಯೋಕೆ,ಬದುಕೋಕೆ, ಉಸಿರಾಡೋಕೆ ತಾಯಿ ಹಾಲು ಅವಶ್ಯಕತೆ ತಾನೇ, ಹಾಗೆ ನಮಗೆ ನಮ್ಮ ಮಾತೃ ಭಾಷೆ.
**ಪ್ರಶ್ನೆ** : ನಮ್ಮ ಚಿಗುರು ಕನ್ನಡ ಪಾಠಶಾಲೆ ಮಕ್ಕಳಿಗೆ ಏನು ಮೆಸೇಜ್ ಹೇಳೋಕೆ ಇಷ್ಟ ಪಡುತ್ತೀರಾ?
**ಉತ್ತರ** : ಕನ್ನಡವನ್ನು ಅಪ್ಪ, ಅಮ್ಮನ ಒತ್ತಾಯಕ್ಕೆ ಕಲೀಬೇಡಿ. ಕನ್ನಡವನ್ನು ಯಾವುದೋ ಮುಲಾಜಿಗೆ, ಅದನ್ನು ಕಲಿತರೆ ಬರೋ ಲಾಭಗಳಿಗೆ ಕನ್ನಡವನ್ನು ಕಲೀಬೇಡಿ. ಕನ್ನಡ ನಿಮ್ಮ ಮಾತೃಭೂಮಿಯ ಒಂದು ಸಂಪತ್ತು. ಅದು ನೀವು ಬೇರೆ ದೇಶಕ್ಕೆ ಬಂದಿದ್ರೂ ಕೂಡ ನಿಮ್ಮ ನರ ನಾಡಿಗಳಲ್ಲಿ, ನಿಮ್ಮ ರಕ್ತನಾಳಗಳಲ್ಲಿ ಕನ್ನಡ ಹರೀತಾ ಇದೆ. ಅದನ್ನ ನೀವು ರೂಢಿಸಿಕೊಂಡ್ರೆ, ಅದು ನಿಮಗೆ ಒಲಿಯುತ್ತೆ. ಕನ್ನಡದಲ್ಲಿ ಏನೇನು ಇದೆ ಅಂತ ತಿಳಿದುಕೊಳ್ಳೋಕೆ ಆದ್ರೂ ಕನ್ನಡ ಕಲಿಬೇಕು. If you don't learn ಕನ್ನಡ now at this age, young age, u will feel terribly sorry in future. terribly sorry… ಅಷ್ಟೆ.
Thank you


# ಚಿಣ್ಣರ ಚಿತ್ರ ಕಲೆ



ಪ್ರಕೃತಿ ಉಪಾಧ್ಯ




ಪನ್ನುಲ್ ಹುಲ್ಲಿನಕಟ್ಟೆ




ಪ್ರೇರಣ ಗೌಡ



ಪ್ರಮಿತಿ ಉಪಾಧ್ಯ






## ನಾ ಕಂಡ ಸಿನಿಮಾ - ಗುರು ಶಿಷ್ಯರು : ಆರುಶ್ ಯೆಲಿಮೇಲಿ

ಗುರು ಶಿಷ್ಯರು 1981 ರಲ್ಲಿ ಬಂದ ತಮಾಷೆ ಮೂವಿ .ನಾನು ಮತ್ತು ನಮ್ಮಕ್ಕ ಇಬ್ಬರು ನಕ್ಕು ನಕ್ಕು ಸಾಕಾಯಿತು . 7 ಜನ ಮುನಿವರ್ಯರು ಚಿತ್ರಲೇಖಳ ಶಾಪಕ್ಕೊಳಗಾಗಿ ಮೂರ್ಖರಾಗುತ್ತಾರೆ ಹಾಗು ರಾಜಗುರುಗಳಾದ ಪೂರ್ಣಾನಂದಯ್ಯನವರ ಮನೆಗೆ ಬಂದು ಅವರ ಶಿಷ್ಯರಾಗುತ್ತಾರೆ. ರಾಜ ನಂದಿವರ್ಧನ ತನ್ನ ಕರ್ತವ್ಯ ವನ್ನು ಮರೆಯಬಾರದೆಂದು ಶಿವ ಗಂಧರ್ವ ಕನ್ಯೆ ಚಿತ್ರಲೇಖಾಳನ್ನು ಭೂಲೋಕಕ್ಕೆ ಹೋಗುವಂತೆ ಮಾಡುತ್ತಾನೆ. ಭೂಲೋಕಕ್ಕೆ ಬಂದ ಚಿತ್ರಲೇಖ ತನ್ನನ್ನೇ ನೋಡುತಿದ್ದ 7 ಜನ ಮುನಿಗಳಿಗೆ ಮೂರ್ಖರಾಗಿ ಎಂದು ಶಾಪ ಕೊಡುತ್ತಾಳೆ. ಅದನ್ನು ನೋಡಿದ ಮುನಿಗಳ ಗುರುಗಳು ಚಿತ್ರಲೇಖಾಗೆ ಅವಳು ಮತ್ತೆ ಭೂಲೋಕಕ್ಕೆ ಬಂದು ಮನುಷ್ಯರನ್ನು ಮುಟ್ಟಿದರೆ ಎಲ್ಲವನ್ನು ಮರೆತು ಸಾಮಾನ್ಯ ಮನುಷ್ಯಳಾಗುತ್ತಾಳೆ ಎಂದು ಶಾಪಕೊಡುತ್ತಾನೆ . ಅದನ್ನು ಕೇಳಿದ ಚಿತ್ರಲೇಖಾ ಅದಕ್ಕೆ ಪರಿಹಾರ ಅವಳ ಮದುವೆ ಆದಾಗ ಮೂರ್ಖ ಶಿಶ್ಯರು ಪುನಃ ಬುದ್ಧಿವಂತ ಮುನಿಗಳಾಗುತ್ತಾರೆ ಎನ್ನುತ್ತಾಳೆ. ನಂತರ ಮೂರ್ಖ ಶಿಷ್ಯರ ಗಲಾಟೆ, ಅವರ ಪೆದ್ದು ಜಗಳ, ಗುರುಗಳ ಮನೆಯಲ್ಲಿ ಮಾಡುವ ರಂಪ ರಾದ್ಧಾಂತ ತುಂಬಾ ತಮಾಷೆಯಾಗಿದೆ. ಮುಂದೆ ಇವರು ಸರಿಹೋಗುತ್ತಾರಾ ಅಥವಾ ಇಲ್ಲವಾ ಎಂದು ಚಿತ್ರ ನೋಡಿ ಹೇಳಿ. ಈ ರಜಾದಿನದಲ್ಲಿ ಫ್ರೆಂಡ್ಸ್ ಅಂಡ್ ಫ್ಯಾಮಿಲಿ ಜೊತೆ ನೋಡಿ .

## ನುಡಿಮುತ್ತು :

1. ನಿದ್ದೆಯಲ್ಲಿ ಕಾಣುವಂಥದ್ದು ಕನಸಲ್ಲ, ನಿದ್ದೆಗೆಡುವಂತೆ ಮಾಡುವುದಿದೆಯಲ್ಲ ಅದು ನಿಜವಾದ ಕನಸು.

2. ಇವತ್ತಿನ ಹಾರೈಕೆ, ನಾಳಿನ ಪೂರೈಕೆ, ಇಂದಿನ ಕನಸು, ನಾಳೆಯ ನನಸು- ಕುವೆಂಪು

## ಜೋಕ್ಸ್ : ಅಭಿಜ್ಞಾ ನಾಗೇಶ್

ಒಂದು ಅಂಗಡಿಯಲ್ಲಿ **offer** ಹೀಗಿತ್ತು.
**1000** ರೂಪಾಯಿಗೆ ಏನೇ ತಗೊಂಡ್ರು **1** ವಾಚು **free!!**
ಮರುದಿನ ಅಂಗಡಿಯಲ್ಲಿ ಗಲಾಟೆ.ಪೊಲೀಸರು ಬಂದರು ....
ಪೊಲೀಸ್ : ಏನು ಗಲಾಟೆ... ಯಾಕೆ?
ಅಂಗಡಿಯವ : ನೋಡಿ ಸರ್... ಈ ಸರ್ದಾರ್ 1000 ರೂಪಾಯಿಗೆ ಚಿಲ್ಲರೆ ತಗೊಂಡು.... ವಾಚು free ಕೇಳ್ತಾನೆ!!

**ಸುಭಾಷಿತ :** ದುಡಿ, ಮೈ ಮುರಿದು ದುಡಿ. ಹೆಚ್ಚು ಹೆಚ್ಚಾಗಿ ದುಡಿ. ಆ ನಿನ್ನ ದುಡಿಮೆಯಲ್ಲಿ ಶ್ರಮವಿರಲಿ, ನಿಯಮವಿರಲಿ, ಗುರಿ ಇರಲಿ, ವಿವೇಚನೆ ಇರಲಿ, ದಕ್ಷತೆ ಇರಲಿ. - ಸರ್ ಎಂ. ವಿಶ್ವೇಶ್ವರಯ್ಯ.


## ಗಾದೆಗಳು:

**ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.**


ಉಪ್ಪಿಲ್ಲದಿದ್ದರೆ ಯಾವುದೇ ಊಟವೂ ರುಚಿಸುವುದಿಲ್ಲ. ಅದೇ ರೀತಿ ತಾಯಿಯೂ ಕೂಡ. ತಾಯಿ ಇರದಿದ್ದರೆ ಜೀವನವೇ ಅಂಧಕಾರವಾಗಿರುವುದು. ತಾಯಿ ನಮ್ಮನ್ನು ಕತ್ತಲಿನಿಂದ ಬೆಳಕಿನೆಡೆಗೆ ನಡೆಸುವ ಗುರು. ಹಾಗೆಯೇ ಮನೆಯಲ್ಲಿ ತಂದೆ, ಅಣ್ಣ, ಅಕ್ಕ, ತಂಗಿ, ಮಾವ, ಅತ್ತೆ ಮುಂತಾಗಿ ನಾನಾ ರೀತಿಯ ಬಂಧುಗಳಿದ್ದರೂ ತಾಯಿಯಷ್ಟು ಮಿಗಿಲಾದ ಬಂಧುಗಳಿಲ್ಲ .

ಹೆತ್ತತಾಯಿ ದೇವರು ನಮಗೆ ನೀಡಿರುವ ಅಮೂಲ್ಯ ಆಸ್ತಿ. ಇಂತಹ ಕಷ್ಟ ಬಂದರೂ ಇತರ ಬಂಧುಗಳು ನಮ್ಮಿಂದ ದೂರವಾದರೂ ನಮ್ಮನ್ನು ಅವಳು ಕೈಬಿಡಳು. ಆದ್ದರಿಂದ "ತಾಯಿಗಿಂತ ಬಂಧುವಿಲ್ಲ" ಎಂಬ ಮಾತು ಅಕ್ಷರಶಃ ಸತ್ಯ.

## ಪದ ಹುಡುಕೋಣ – ವ್ಯವಸಾಯ




## ಚಿತ್ರ ಶೀರ್ಷಿಕೆ : ಪ್ರಕೃತಿ ಉಪಾಧ್ಯ



**ಹಕ್ಕಿ ಹಾರುತಿದೆ ನೋಡಿದಿರಾ?**

## ಪಾಕ ಶಾಲೆ : ಪ್ರಮಿತಿ ಉಪಾಧ್ಯ
## ಹಾಲು ಬಾಯಿ

ಮೊದಲು ಒಂದು ಲೋಟ ಅಕ್ಕಿಯನ್ನು ನಾಲ್ಕು ತಾಸು ನೀರಲ್ಲಿ ನೆನೆಸಿ ... ನಂತರ ಮಿಕ್ಸಿಯಲ್ಲಿ ನೆನೆಸಿದ ಅಕ್ಕಿ ಅರ್ಧ ಕಪ್ ಕಾಯಿತುರಿ ಹಾಕಿ ನುಣ್ಣಗೆ ರುಬ್ಬಿ.. ಒಂದು ಬಾಣಲೆಗೆ ಎರಡು ಅಚ್ಚು ಬೆಲ್ಲ ಸ್ವಲ್ಪ ನೀರು ಹಾಕಿ ಕರಗಿಸಿ ಸೋಸಿಕೊಳ್ಳಿ ... ಬಾಣಲೆಗೆ ರುಬ್ಬಿದ ಮಿಶ್ರಣ ಬೆಲ್ಲದ ಪಾಕ ಸ್ವಲ್ಪ ಏಲಕ್ಕಿ ಪುಡಿ ಸ್ವಲ್ಪ ತುಪ್ಪ ಹಾಕಿ ಚೆನ್ನಾಗಿ ಮಗುಚಿ ...ಅದು ಗಟ್ಟಿಯಾದ ಮೇಲೆ ತುಪ್ಪ ಸವರಿದ ತಟ್ಟೆಗೆ ಹಾಕಿ .. ತಣ್ಣಗಾದ ಮೇಲೆ ಕತ್ತರಿಸಿ...ತುಪ್ಪದೊಂದಿಗೆ ತಿನ್ನಿ !

## ಮಂಕುತಿಮ್ಮನ ಕಗ್ಗ

ಇಹುದೋ ಇಲ್ಲವೋ ತಿಳಿಯಗೊಡದೊಂದು ವಸ್ತು ನಿಜ।
ಮಹಿಯಿಂ ಜಗವಾಗಿ ಜೀವವೇಷದಲಿ ॥
ವಿಹರಿಪುದದೊಳ್ಳಿತೆಂಬುದು ನಿಸದವಾದೊಡಾ ।
ಗಹನ ತತ್ತ್ವಕೆ ಶರಣೋ – ಮಂಕುತಿಮ್ಮ ॥ ೩ ॥

ಏನು ಜೀವನದರ್ಥ? ಏನು ಪ್ರಪಂಚಾರ್ಥ?
ಏನು ಜೀವಪ್ರಪಂಚಗಳ ಸಬಂಧ?
ಕಾಣದಿಲ್ಲಿರ್ಪುದೇನಾನುಮುಂಟೆ? ಅದೇನು?
ಜ್ಞಾನಪ್ರಮಾಣವೇಮ್? ಮಂಕುತಿಮ್ಮ ।।೪ ॥

ದೇವರೆಂಬುದದೇನು ಕಗ್ಗತ್ತಲ ಗವಿಯೆ?
ನಾವರಿಯಲಾದೆಲ್ಲದರೊಟ್ಟು ಹೆಸರೇ?
ಕಾವನೊರ್ವನಿರಲ್ಕೆ ಜಗದ ಕಥೆಯೇಕಿಂತು ?
ಸಾವು ಹುಟ್ಟುಗಳೇನು?- ಮಂಕುತಿಮ್ಮ॥ ೫



## ಜೂನ್ ನಲ್ಲಿ ಜನಿಸಿದ ಪ್ರಸಿದ್ಧ ಕನ್ನಡಿಗರು : ನಮಿತ ಪಂಡಿತ್

- ಮಾಸ್ತಿ ವೆಂಕಟೇಶ್ ಅಯ್ಯಂಗಾರ್: 06-ಜೂನ್ -1891
- ಪ್ರಕಾಶ್ ಪಡುಕೋಣೆ : 10-ಜೂನ್ -1955
- ಜಾರ್ಜ್ ಫೆರ್ನಾಂಡಿಸ್ : 03-ಜೂನ್ -1930
- ಹಂಸಲೇಖಾ : 23-ಜೂನ್ -1951
- C.N.R. ರಾವ್ : 30-ಜೂನ್ -1934
- ಕೃಷ್ಣ ರಾಜ ಒಡೆಯರ್ IV : 04-ಜೂನ್ -1884
- A.N. ಮೂರ್ತಿ ರಾವ್ : 6-ಜೂನ್ -1900
- ಚೈತ್ರ ಹೆಚ್ ಜಿ: 18-ಜೂನ್-1984
- ಕೆ.ಎಸ್. ಹೆಗ್ಡೆ: 11-ಜೂನ್-1909
- ಶಶಾಂಕ್: 24-ಜೂನ್ -1972